# ತಿಪ್ಪೆಯಂತಾದ ಒಟಿಟಿ ನವಾಜುದ್ದೀನ್ ಗುಡ್‌ಬೈ

■ ವಿಶಾಖ ಎನ್.



ಗಣೇಶ್ ಗಾಯ್‌ತೊಂಡೆ – ಈ ಪಾತ್ರ ಭಾರತದ ಮಟ್ಟಿಗೆ ಅಷ್ಟೇ ಅಲ್ಲ, ಜಗತ್ತಿನ ಹಲವು ದೇಶಗಳಲ್ಲಿ ನೋಡುಗರ ಹುಬ್ಬೇರುವಂತೆ ಮಾಡಿತ್ತು. ನೆಟ್‌ಫ್ಲಿಕ್ಸ್‌ನಲ್ಲಿ ಹಿಂದಿ ಭಾಷೆಯ ವಸ್ತುವಿಷಯದ ರುಜು ಹಾಕಿದ 'ಸೇಕ್ರೇಡ್ ಗೇಮ್ಸ್' ಸರಣಿಯ, ಮನಕಲಕಿದ ಪಾತ್ರ ಅದು. ವಿಲಕ್ಷಣವೂ ನಿರ್ಲಿಪ್ತವೂ ಪರಮ ಕ್ರೌರ್ಯದಲ್ಲಿ ಅದ್ದಿ ತೆಗೆದಂತೆಯೂ ಇದ್ದ ಪಾತ್ರ. ಕಾಡುವ ಅಭಿನಯದ ಮೂಲಕ ನವಾಜುದ್ದೀನ್ ಸಿದ್ದಿಕಿ ಆ ಪಾತ್ರವೇ ತಾವಾದಂತಿದ್ದರು. ಹೀಗೆ 'ಓವರ್ ದಿ ಟಾಪ್' (ಒಟಿಟಿ) ವೇದಿಕೆ ಮೇಲೆ ಸಂಚಲನ ಸೃಷ್ಟಿಸಿದ್ದ ಅವರೇ ಇನ್ನು ಮುಂದೆ ಇಂತಹ ವೇದಿಕೆಗಳ ಸರಣಿಗಳಲ್ಲಾಗಲೀ ಸಿನಿಮಾಗಳಲ್ಲಾಗಲೀ ಅಭಿನಯಿಸುವುದಿಲ್ಲ ಎಂದು ಘೋಷಿಸಿದ್ದಾರೆ.

ನವಾಜುದ್ದೀನ್ ಸಿದ್ದಿಕಿ ಹೀರೊ ಮೆಟೀರಿಯಲ್ ಅಲ್ಲದೇ ಇದ್ದರೂ ನಮ್ಮ ನಡುವಿನ ಹತಾಶ, ವಿಕ್ಷಿಪ್ತ ವ್ಯಕ್ತಿತ್ವಗಳಿಗೆ ಕನ್ನಡಿ ಹಿಡಿದಂತಹ ಪಾತ್ರಗಳನ್ನು ಆರಿಸಿಕೊಂಡವರು. 'ತಲಾಷ್'ನಲ್ಲಿ ಕುಂಟನಾಗಿಯೂ ಅಪರೂಪದ ಪ್ರೇಮಿಯಾಗಿ ಅವರ ಕಣ್ಣಲ್ಲಿ ನಾವು ಕಂಡಿದ್ದ ಒಲವು, 'ಕಹಾನಿ'ಯ ಖಡಕ್ ಪೊಲೀಸ್ ರೂಪದಲ್ಲಿನ ಬಿಸುಪು, 'ಭಜರಂಗಿ ಭಾಯಿಜಾನ್'ನಲ್ಲಿನ ಟಿ.ವಿ. ವರದಿಗಾರಿಕೆಯ ವ್ಯಂಗ್ಯದರ್ಶನಕಾರ, 'ಲಂಚ್ ಬಾಕ್ಸ್'ನಲ್ಲಿನ ಸಹಜ ಕಾರಕೂನ, 'ಫೋಟೊಗ್ರಾಫ್' ಚಿತ್ರದ ಜಡಭರತ ಮುಖದ ಊಹಾತೀತ ಪ್ರೇಮಿ... ಹೀಗೆ ನವಾಜುದ್ದೀನ್ ಪ್ರೇಕ್ಷಕರಿಗೆ ಹಲವು ಪಾತ್ರಗಳಲ್ಲಿ ದಕ್ಕಿದ್ದಾರೆ. ಒಟಿಟಿಯಲ್ಲಿಯೂ ಅವರ ಇರುವಿಕೆ ಸರಣಿಗಳಿಗೆ ವೇಗವರ್ಧಕವಾಗಿ ಒದಗಿಬಂದದ್ದು ನಿಜ. ಈಗ ಅವರೇ ಇಂತಹ ವೇದಿಕೆಯಿಂದ ವಿಮುಖರಾಗಿರುವುದಕ್ಕೆ ಕಾರಣವಿದೆ. ಇಲ್ಲಿ ಅರ್ಥವಿಲ್ಲದ ಸಾರವನ್ನು ತಂದು ಸುರಿದು, ಹೊಲಸೆಬ್ಬಿಸತೊಡಗಿದ್ದಾರೆನ್ನುವುದು ಅವರ ಪ್ರತಿಭಟನೆಯ ದನಿಯೂ ಇರುವ ಅನುಭವ ನುಡಿ.

'ಸಿನಿಮಾಗಳಲ್ಲಿ ತಾರೆಗಳು ಹೊಳೆದವು. ಆವರಿಸಿಕೊಂಡವು. ದೊಡ್ಡ ಮೊತ್ತ ಹರಿದಾಡಿತು. ಈಗ ತಾರೆಗಳು ಒಟಿಟಿಯಲ್ಲೂ ಬಂದಿವೆ. ಇಲ್ಲಿಯೂ ದೊಡ್ಡ ಕುಳಗಳು ಸುದೀರ್ಘಾವಧಿ ಸರಕನ್ನು ಪೂರೈಸಲು ಒಪ್ಪಂದ ಮಾಡಿಕೊಂಡಿದ್ದಾರೆ. ಪೂರೈಕೆಯಷ್ಟೆ ಮುಖ್ಯವಾದಾಗ, ಅರ್ಥಹೀನ ವಸ್ತು ವಿಷಯಗಳನ್ನು ತಂದು ಸುರಿಯುವುದು ಸಹಜವೆಂಬಂತೆ ಆಗಿಬಿಡುತ್ತಿದೆ. ನನಗೇ ನೋಡಲಾಗದ ಕಂಟೆಂಟಿನ ಭಾಗ ನಾನಾಗುವುದು ಇಷ್ಟವಿಲ್ಲ' ಎಂಬರ್ಥದ ಅಭಿಪ್ರಾಯವನ್ನು ನವಾಜುದ್ದೀನ್ ವೆಬ್‌ಸೈಟ್ ಒಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ■

# ಶ್ರೀದೇವಿ-ಜಯಪ್ರದಾ ನನ್ನ 'ಬ್ರೆಡ್ ಅಂಡ್ ಬಟರ್'



ಸಂಜೋಗ್, ಔಲಾದ್, ಮಜಾಲ್, ಜಸ್ಟಿಸ್ ಚೌಧರಿ, ಮವ್ವಾಲಿ, ತೌಫಾ – ಇವೆಲ್ಲವೂ ಜಿತೇಂದ್ರ ಅಭಿನಯಿಸಿದ ರೀಮೇಕ್ ಚಿತ್ರಗಳು. ತೆಲುಗಿನಲ್ಲಿ ಸೂಪರ್‌ಹಿಟ್ ಆದ ವಸ್ತುಗಳನ್ನೆಲ್ಲ ಅವರು ಅನಾಮತ್ತಾಗಿ ಹಿಂದಿಗೆ ತಂದರು. ಸತತವಾಗಿ ಗೆದ್ದರು.

'ಸೌಂದರ್ಯ ಲಹರಿ' ಎಂಬ ಸಿನಿಮಾ ಷೋನಲ್ಲಿ ತೆಲುಗಿನ ನಿರ್ದೇಶಕ ಕೆ. ರಾಘವೇಂದ್ರ ರಾವ್ ಅವರ ಜತೆ ಜಿತೇಂದ್ರ ಸಂದರ್ಶನವೊಂದರಲ್ಲಿ ನೆನೆದ ಪ್ರಾಮಾಣಿಕ ಸತ್ಯ ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಹರಿದಾಡಿತು.

1982ರಲ್ಲಿ 'ದೀದಾರ್–ಎ–ಯಾರ್' ಎಂಬ ಜಿತೇಂದ್ರ ಅಭಿನಯದ ಹಿಂದಿ ಚಿತ್ರ ತೆರೆಕಂಡಿತ್ತು. ಆ ಕಾಲದಲ್ಲಿಯೂ ಎರಡೂವರೆ ಕೋಟಿ ರೂಪಾಯಿ ನಷ್ಟ ಉಂಟುಮಾಡಿದ ಚಿತ್ರವದು. ಅನಿರೀಕ್ಷಿತವಾಗಿ ದೊಡ್ಡ ಫ್ಲ್ಯಾಪ್ ಎದುರಾದಾಗ ಜಿತೇಂದ್ರ ಕಂಗಾಲಾಗದೆ ತಕ್ಷಣವೇ 'ಹಿಮ್ಮತ್‌ವಾಲಾ' ಸಿನಿಮಾ ಒಪ್ಪಿಕೊಂಡಿದ್ದರು. ತೆಲುಗಿನಲ್ಲಿ ಕೃಷ್ಣ ಅಭಿನಯಿಸಿದ್ದ 'ಊರುಕಿ ಮೊನಗಾಡು' ಸಿನಿಮಾದ ರೀಮೇಕ್ ಇದು. ಪದ್ಮಾಲಯ ಸ್ಟುಡಿಯೋಸ್‌ನ ಜಿ.ಎ. ಶೇಷಗಿರಿ ರಾವ್ ಈ ರೀಮೇಕ್ ಮೇಲೆ ಬಂಡವಾಳ ಹೂಡಿದರು. 1983ರಲ್ಲಿ ತೆರೆಕಂಡ ಚಿತ್ರದಲ್ಲಿ ಜಿತೇಂದ್ರ–ಶ್ರೀದೇವಿ ಜೋಡಿ ಮೋಡಿ ಮಾಡಿತು. ಆ ಕಾಲದಲ್ಲೇ ಐದು ಕೋಟಿ ರೂಪಾಯಿ ಹಣವನ್ನು ಬಾಚಿಹಾಕಿತು. ಅದಾದಮೇಲೆ ದಕ್ಷಿಣದ ಚಿತ್ರಗಳ ಮೇಲೆ ಜಿತೇಂದ್ರ ಕಣ್ಣುಬಿತ್ತು.

'ಶ್ರೀದೇವಿ–ಜಯಪ್ರದಾ ಆಗ ನನ್ನ ಪಾಲಿನ ಬ್ರೆಡ್ ಅಂಡ್ ಬಟರ್ ಆದರು' ಎಂದು ಜಿತೇಂದ್ರ ಪ್ರಾಮಾಣಿಕವಾಗಿ ಹೇಳಿಕೊಂಡಿದ್ದನ್ನು ಅನೇಕ ಪ್ರೇಕ್ಷಕರು ಮೆಚ್ಚಿಕೊಂಡಿದ್ದಾರೆ. ದಕ್ಷಿಣ ಭಾರತದ ಚಿತ್ರಗಳಿಗೂ ಹಿಂದಿ ಸಿನಿಮಾಗೂ ಇರುವ ಇಂತಹ ನಂಟಿನ ಕಥೆಗಳು ಎಷ್ಟೋ ಜನರಿಗೆ ಅಪರೂಪದ ಪ್ರಸಂಗಗಳಾಗಿಯೂ ಕಂಡಿವೆ. ■